

ಆ ದರಿದ್ರುದವು ಏನ್ ಬದ್ಲಾಯಿಸ್ಕಂಡ್ರು ಆ ಕೆಟ್ಟ ಜಾತೆ ವಾಸ್ನೆ ಎಲ್ಲೋತದೆ. ಅವುನ್ನು ದೂರ ಇಟ್ಟೀರ್ಬೇಕು. ಏನಾದ್ರೂ ಮಾಡಿ ಅವ್ನುನ್ನ ಇಲ್ಲಿಂದ ಎತ್ತಂಗಂಡಿ ಮಾಡುಸ್ಬೇಕು. ದಿನಬೆಳಗ್ಗೆ ಆ ದರಿದ್ರೋನ ಮುಖ ನೋಡುದ್ರೇ ಏಳ್ಗೆ ಆಗಲ್ಲ' ಅಂತ ಸಮಯ ಕಾಯುತ್ತಿದ್ದ. ಅಂತ ಹೊತ್ತಿನಲ್ಲಿ ಫಣಿರಾಜ್ ರುದ್ರಮೂರ್ತಿಗೆ ವರದಾನವಾಗಿ ಬಂದ. ಆಫೀಸಿಗೆ ಡಿ.ಟಿ.ಯಾಗಿ ಫಣಿರಾಜ್ ಎಂಬೋನು ಬಂದನೋ ಅವಾಗಿನಿಂದ ಕಾಂತನಿಗೆ ಸಂಕ್ಟ ಸುರುವಾಯ್ತು. ಫಣಿರಾಜ್ ಕಾಂತನ ಹತ್ತಿರದ ಜಾತಿಯವನೇ. ಅವನೂ ಜಾತಿಯಿಂದ ಬಿಡಿಸಿಕೊಳ್ಳಲು ಹೆಸರು ಬದಲಿಸಿಕೊಂಡಿದ್ದ. ಮೊದಲು ನಾಗ್ರ ಅಂತೇನೋ ಇತ್ತು. ಈಗ ಫಣಿರಾಜ್. ಜಾತಿಸೂಚಕ ಹೆಸರನ್ನು ಕಳೆದುಕೊಂಡಿದ್ದರೂ ಜಾತಿಯ ಹೆಸರಿನಲ್ಲೇ ಪ್ರಮೋಷನ್ ಪಡೆದು ಡೆಪ್ಯೂಟಿ ತಹಸಿಲ್ದಾರ್ ಆಗಿ ಮೂಡ್ಲಾಪುರಕ್ಕೆ ಬಂದಿದ್ದ. ಬಂದಾಗ ಅವನ ಬಣ್ಣದ ಮಾತುಗಳನ್ನು ಕೇಳಿ ನೋಡಿ ಇಡೀ ಮೂಡ್ಲಾಪುರ್ದ ತಾಲೂಕು ಆಫೀಸೇ ಬೆರಗಾಗಿತ್ತು. ಗಂಟೆಗೊಮ್ಮೆ ಟೀ ತರಿಸಿ ಎಲ್ಲರ ಪ್ರೀತಿಗೆ ಪಾತ್ರನಾಗಿದ್ದ ಫಣಿರಾಜ್.

ಒಂದೆರಡು ತಿಂಗಳು ಕಳೆಯುತ್ತಲೇ ಫಣಿರಾಜ್ ಮೊದಲಿನ ಸ್ಥಿತಿಗೆ ಬದಲಾದ. ಅವ್ನು ಕಣ್ಲೂರು ಕಡೆಯಿಂದ ಇಲ್ಗೆ ವರ್ಗವಾಗಿ ಬಂದದ್ದೇ ಜನ್ರತ್ರ ದುಡ್ಡು ಕೀಳ್ತಾನೆ ಅಂತ ಅಲ್ಲಿನ ಎಮ್ಮೆಲ್ಲೆಗೆ ಗೊತ್ತಾಗಿ ಅವ್ನನ್ನ ಹೇಗಾದ್ರೂ ವತ್ತಾಕುದ್ರೆ ಸಾಕೆಂದು ಪ್ರಮೋಷನ್ ಹೆಸ್ರಲ್ಲಿ ಮೂಡ್ಲಾಪುರ್ಕೆ ಸಾಗಾಕಿದ್ದ. ಈಗ ಫಣಿರಾಜ್ ಡಿಟಿ ಆಗಿದ್ದಕ್ಕೂ, ಹಣ ಸರಾಗವಾಗಿ ಹರಿಯೋ ಮಡ್ಲಾಯಿಗೆ